ಕನ್ನಡ ಸಾಹಿತ್ಯ ಪರಿಷತ್ತು
ಬೆಂಗಳೂರು-೧೮

ಸ್ಥಾಪನೆ: ೧೯೧೫


ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್


ಸರ್ ಎಂ. ವಿಶ್ವೇಶ್ವರಯ್ಯ


ಸರ್ ಮಿರ್ಜಾ ಇಸ್ಮಾಯಿಲ್



# ಕನ್ನಡದ ಧ್ರುವತಾರೆ ಸಾಧಕರೊಂದಿಗೆ ಮಾತು-ಕತೆ

ಶನಿವಾರ, ೧೬ನೆಯ ಡಿಸೆಂಬರ್ ೨೦೨೩ ಸಂಜೆ: ೫-೦೦ ಗಂಟೆಗೆ

ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ

ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮



ಅಧ್ಯಕ್ಷತೆ

**ನಾಡೋಜ ಡಾ. ಮಹೇಶ ಜೋಶಿ**

ಅಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು



ಕನ್ನಡದ ಧ್ರುವತಾರೆ

**ಶ್ರೀ ಶಂಕರ ಎಂ. ಬಿದರಿ**

ನಿವೃತ್ತ ಪೊಲೀಸ್ ಮಹಾ ನಿರ್ದೇಶಕರು

~~~ ಸರ್ವರಿಗೂ ಆದರದ ಸ್ವಾಗತ ~~~

**ನೇ.ಭ. ರಾಮಲಿಂಗ ಶೆಟ್ಟಿ**
ಗೌರವ ಕಾರ್ಯದರ್ಶಿ

**ಡಾ. ಪದ್ಮಿನಿ ನಾಗರಾಜು**
ಗೌರವ ಕಾರ್ಯದರ್ಶಿ

**ಬಿ.ಎಂ. ಪಟೇಲ್‌ಪಾಂಡು**
ಗೌರವ ಕೋಶಾಧ್ಯಕ್ಷರು

Scanned with OKEN Scanner
~~~

# ಕನ್ನಡದ ಧ್ರುವತಾರೆ



ಕನ್ನಡಿಗರು ಇಂದು ಎಲ್ಲಾ ಕ್ಷೇತ್ರಗಳಲ್ಲಿಯೂ ಬೆರಗು ಹುಟ್ಟಿಸುವಂತಹ ಸಾಧನೆಯನ್ನು ಮಾಡಿದ್ದಾರೆ. ಕೆಲವು ಕ್ಷೇತ್ರಗಳಲ್ಲಿ ಮಾಡಿರುವ ಸಾಧಕರ ಕುರಿತು ಮಾಹಿತಿ ಲಭ್ಯವಿರುತ್ತದೆ. ಕೆಲವು ಕ್ಷೇತ್ರಗಳಲ್ಲಿನ ಸಾಧಕರು 'ಎಲೆ ಮರೆಯ ಮರ'ಗಳಂತೆ ಅಪಾರ ಸಾಧನೆಯನ್ನು ಮಾಡಿದ್ದಾರೆ. ಮಾಹಿತಿ ಇದ್ದರೂ ಸಾಧಕರನ್ನು ನೇರವಾಗಿ ನೋಡುವ ಅವರ ಜೊತೆ ಸಂವಾದ ಮಾಡುವ ಅವಕಾಶ ಸಾರ್ವಜನಿಕರಿಗೆ ಸಿಕ್ಕಿರುವುದಿಲ್ಲ. ಕನ್ನಡ-ಕನ್ನಡಿಗ-ಕರ್ನಾಟಕದ ಅಭ್ಯುದಯವನ್ನು ತನ್ನ ಧ್ಯೇಯವಾಗಿ ಹೊಂದಿರುವ ಕನ್ನಡ ಸಾಹಿತ್ಯ ಪರಿಷತ್ತು ಈ ಹಿನ್ನೆಲೆಯಲ್ಲಿ '**ಕನ್ನಡದ ಧ್ರುವತಾರೆ**' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ರೂಪಿಸಿದ್ದು ಇದರಲ್ಲಿ ಸಾಧಕರು ಅತಿಥಿಗಳಾಗಿ ಬಂದು ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾರೆ, ಸಾರ್ವಜನಿಕರ ಪ್ರಶ್ನೆಗಳಿಗೂ ಕೂಡ ಉತ್ತರಿಸುತ್ತಾರೆ. ಸಾಧಕರು ಮತ್ತು ಸಾರ್ವಜನಿಕರ ನಡುವೆ ಸುವರ್ಣ ಸೇತುವೆಯಾಗುವ ಮಹತ್ವಾಕಾಂಕ್ಷೆಯ ಈ ಕಾರ್ಯಕ್ರಮದ ಅತಿಥಿಯಾಗಿ ನಿವೃತ್ತ ಪೊಲೀಸ್ ಮಹಾ ನಿರ್ದೇಶಕರಾದ ಶ್ರೀ ಶಂಕರ ಎಂ. ಬಿದರಿ ಅವರು ಭಾಗವಹಿಸಲಿದ್ದಾರೆ.

## ಶಂಕರ ಮಹದೇವ ಬಿದರಿ

ದಕ್ಷ ಪೊಲೀಸ್ ಅಧಿಕಾರಿ, ಆಡಳಿತಗಾರ ಎನ್ನಿಸಿಕೊಂಡಿರುವ ಶಂಕರ ಮಹಾದೇವ ಬಿದರಿಯವರು ಜನಿಸಿದ್ದು ೧೯೫೪ರ ಆಗಸ್ಟ್ ೨೭ರಂದು. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಗಲಗಲಿ ಅವರ ಜನ್ಮಸ್ಥಳ. ತಂದೆ ಮಹಾದೇವಪ್ಪ ಬಿದರಿ ಕೃಷಿಕರು, ನೇಕಾರರ ಸಹಕಾರ ಸಂಘದ ಕಾರ್ಯದರ್ಶಿಗಳಾಗಿ ಕೂಡ ಕಾರ್ಯನಿರ್ವಹಿಸಿದ್ದರು. ತಾಯಿ ಗೌರಮ್ಮ ಗೃಹಿಣಿ. ಶಂಕರ ಬಿದರಿಯವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬನಹಟ್ಟಿಯಲ್ಲಿಯೂ, ಪ್ರೌಢಶಿಕ್ಷಣವನ್ನು ಬಾಗಲಕೋಟೆಯಲ್ಲಿಯೂ, ಪದವಿ ಪೂರ್ವ ಶಿಕ್ಷಣವನ್ನು ನಿಪ್ಪಾಣಿಯಲ್ಲಿಯೂ ಪಡೆದ ನಂತರ ಕೌಟುಂಬಿಕ ಅನಿವಾರ್ಯತೆಯಿಂದ ಟೆಲಿಫೋನ್ ಅಪರೇಟರ್ ಆಗಿ ವೃತ್ತಿಯನ್ನು ಆರಂಭಿಸಿದರು. ಈ ವೃತ್ತಿಯಲ್ಲಿದ್ದಾಗಲೇ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಬಾಹ್ಯ ವಿದ್ಯಾರ್ಥಿಯಾಗಿ ಪದವಿಯನ್ನು ಪಡೆದರು. ಅವರ ವಿದ್ಯಾದಾಹ ಇಲ್ಲಿಗೇ ನಿಲ್ಲದೆ ಕೆ.ಎ.ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗುಲ್ಬರ್ಗಾದಲ್ಲಿ ಅಸಿಸ್ಟೆಂಟ್ ಕಮೀಷನರ್ ಆಗಿ ೧೯೭೭ರಿಂದ ೧೯೭೮ರವರೆಗೆ ಕಾರ್ಯನಿರ್ವಹಿಸಿದರು.

ಶಂಕರ ಬಿದರಿ ಬಾಲ್ಯದಿಂದಲೂ ಮಹತ್ವಾಕಾಂಕ್ಷಿಗಳು, ದೊಡ್ಡ ದೊಡ್ಡ ಕನಸುಗಳನ್ನು ಇಟ್ಟುಕೊಂಡವರು. ೧೯೭೮ರಲ್ಲಿ ಭಾರತೀಯ ಪೊಲೀಸ್ ಸೇವೆಗೆ ಆಯ್ಕೆಯಾಗಿ ೨೦೧೨ರಲ್ಲಿ ನಿವೃತ್ತಿಯವರೆಗೂ ಕಾರ್ಯನಿರ್ವಹಿಸಿದರು. ಟೆಲಿಫೋನ್ ಅಪರೇಟರ್ ಆಗಿ ತಮ್ಮ ವೃತ್ತಿಯನ್ನು ಆರಂಭಿಸಿದವರು ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರಾಗಿ ನಿವೃತ್ತರಾಗಿದ್ದು ಸಾಧನೆಯ ಎತ್ತರವನ್ನು ತೋರಿಸುತ್ತದೆ. ಈ ಕಾರಣದಿಂದಲೇ ಅವರು ತಮ್ಮ ಬದುಕಿನ ಕಾಲದಲ್ಲಿಯೇ ದಂತಕತೆಯಂತೆ ಹೆಸರು ಮಾಡಿದರು.

ಶಂಕರ ಬಿದರಿಯವರು ಎ.ಎಸ್.ಪಿ.ಯಾಗಿ ಬೆಳಗಾವಿ ಮತ್ತು ತಿಪಟೂರಿನಲ್ಲಿ, ಡಿವೈಎಸ್ಪಿಯಾಗಿ ಮಂಡ್ಯ, ಚಿತ್ರದುರ್ಗ,ತುಮಕೂರು, ಬಳ್ಳಾರಿ, ಧಾರವಾಡ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿ ದಕ್ಷ ಅಧಿಕಾರಿ ಎಂದು ಹೆಸರನ್ನು ಪಡೆದರು. ಪೊಲೀಸ್ ಇಲಾಖೆಯಲ್ಲಿ ಗಮನಾರ್ಹ ಸುಧಾರಣೆಗಳನ್ನು ತಂದರು. ಅವರ ಮುಖ್ಯ ಸಾಧನೆ ಎಂದರೆ ವೀರಪ್ಪನ್ ವಿರುದ್ಧ ಕಾರ್ಯಾಚರಣೆ ನಡೆಸಿದ ಟಾಸ್ಕ್‌ಫೋರ್ಸ್‌ನ ಕಮಾಂಡರ್ ಆಗಿ ಕಾರ್ಯನಿರ್ವಹಿಸಿದ್ದು. ಅವರ ಅವಧಿಯಲ್ಲಿ ವೀರಪ್ಪನ್ ತಂಡದ ಸಂಖ್ಯೆ ಇನ್ನೂರರಿಂದ ಐದಕ್ಕೆ ಇಳಿದಿತ್ತು. ಶ್ರೀ ಜೆ.ಎಚ್. ಪಟೇಲರು ಮುಖ್ಯಮಂತ್ರಿಗಳಾದಾಗ ಡಿ.ಐ.ಜಿ. ಮತ್ತು ಇಂಟಲಿಜೆನ್ಸ್ ಇಲಾಖೆಯ ಐ.ಜಿ.ಯಾಗಿ ಮೂರುವರೆ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಪೊಲೀಸ್ ಇಲಾಖೆಯ ಹಲವು ಪ್ರಮುಖ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ಅವರು ಬೆಂಗಳೂರು ನಗರದ ಕಮೀಷನರ್ ಆಗಿ, ರಾಜ್ಯ ಪೊಲೀಸ್ ಆಯುಕ್ತರಾಗಿ ಮಹತ್ವದ ಸೇವೆಯನ್ನು ಸಲ್ಲಿಸಿದರು. ತಮ್ಮ ವೃತ್ತಿಯುದ್ದಕ್ಕೂ ಪ್ರಾಮಾಣಿಕತೆ ಮತ್ತು ದಕ್ಷತೆಯಿಂದ ಹೆಸರು ಮಾಡಿದ ಶಂಕರ ಬಿದರಿಯವರು ಕರ್ನಾಟಕ ಮಾತ್ರವಲ್ಲದೇ ಅಖಿಲ ಭಾರತ ಮಟ್ಟದಲ್ಲಿ ಮಾದರಿ ಪೊಲೀಸ್ ಅಧಿಕಾರಿಯಾಗಿ ಹೆಸರನ್ನು ಪಡೆದರು.

ಎರಡು ಸಲ ಮುಖ್ಯಮಂತ್ರಿಗಳ ಬಂಗಾರದ ಪದಕ (೧೯೮೯ ಮತ್ತು ೧೯೯೧) ಪಡೆದ ಮೊದಲ ಪೊಲೀಸ್ ಅಧಿಕಾರಿಗಳಾದ ಶಂಕರ ಬಿದರಿ ರಾಷ್ಟ್ರಪತಿಗಳ ಶೌರ್ಯ ಪ್ರಶಸ್ತಿಯನ್ನು ಎರಡು ಸಲ ಪಡೆದ ಮೊದಲ ಕನ್ನಡಿಗರೂ ಕೂಡ ಹೌದು (೧೯೯೧, ೨೦೧೧). ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಶೌರ್ಯ ಪದಕವನ್ನು ಪಡೆದ ಮೊದಲ ಕನ್ನಡಿಗರಾದ ಶಂಕರ ಬಿದರಿಯವರು (೧೯೯೦) ರಾಷ್ಟ್ರಪತಿಗಳ ವಿಶೇಷ ಪುರಸ್ಕಾರವನ್ನು ೧೯೯೬ ಮತ್ತು ೨೦೦೪ರಲ್ಲಿ ಪಡೆದಿದ್ದರು. ಆಡಳಿತದಲ್ಲಿ ಯಶಸ್ವಿಯಾಗಿ ತಂತ್ರಜ್ಞಾನವನ್ನು ಅಳವಡಿಸಿದ್ದಕ್ಕಾಗಿ ೨೦೧೨ರಲ್ಲಿ ಭಾರತ ಸರ್ಕಾರದಿಂದ ವಿಶೇಷ ಪುರಸ್ಕಾರವನ್ನು ಪಡೆದ ಅವರು ರೈಲ್ವೆ ಇಲಾಖೆಯಿಂದ ನಗದು ಬಹುಮಾನವನ್ನು ಪಡೆದಿದ್ದರು. ಇದಲ್ಲದೆ ವೀರಪ್ಪನ್ ತಂಡದ ವಿರುದ್ಧ ನಡೆಸಿದ ಯಶಸ್ವಿ ಕಾರ್ಯಾಚರಣೆಗಾಗಿ ತಂಡಕ್ಕೆ ಎಂಟು ಕೋಟಿ ಮತ್ತು ವೈಯಕ್ತಿಕವಾಗಿ ನಗದು ಬಹುಮಾನವನ್ನು ಪಡೆದಿದ್ದರು. ಭಾರತೀಯ ಪೊಲೀಸ್ ಇತಿಹಾಸದಲ್ಲಿಯೇ ಅಧಿಕಾರಿಯೊಬ್ಬರು ಪಡೆದ ಅತಿ ದೊಡ್ಡ ನಗದು ಬಹುಮಾನ ಇದಾಗಿದೆ. ಇದರಲ್ಲಿನ ಬಹುಪಾಲು ಹಣವನ್ನು ಸಮಾಜ ಸೇವೆಗಾಗಿ ಬಳಸಿದ್ದು ಅವರ ವ್ಯಕ್ತಿತ್ವದ ಹಿರಿಮೆಗೆ ಸಾಕ್ಷಿಯಾಗಿದೆ.

ಶಂಕರ ಬಿದರಿಯವರ ಸೇವೆಗೆ ಅನೇಕ ಸಂಘ ಸಂಸ್ಥೆಗಳು ಪ್ರಶಸ್ತಿ ಪುರಸ್ಕಾರಗಳನ್ನು ನೀಡಿ ಸನ್ಮಾನಿಸಿವೆ. ಗುಲ್ಬರ್ಗಾ ವಿಶ್ವವಿದ್ಯಾಲಯವು ೨೦೧೨ರಲ್ಲಿ ಅವರಿಗೆ ಆಡಳಿತ ರಂಗದಲ್ಲಿನ ಅತ್ಯುತ್ತಮ ಸೇವೆಗಾಗಿ ಗೌರವ ಡಾಕ್ಟರೇಟ್ ನೀಡಿ ಪುರಸ್ಕರಿಸಿತ್ತು.

ಶಂಕರ ಬಿದರಿಯವರ ಕುಟುಂಬದವರು ಅವರ ಸಾಧನೆಗೆ ಸದಾ ಬೆಂಬಲವಾಗಿ ನಿಂತಿದ್ದಾರೆ. ಅವರ ಮಡದಿ ಡಾ. ಸೂರ್ಯಕುಮಾರಿ ಗಲಗಲಿ ಪರಿಣತ ವೈದ್ಯರಾಗಿ ಸೇವೆ ಸಲ್ಲಿಸಿದರೆ, ಮಗಳು ವಿಜಯಲಕ್ಷ್ಮಿ ಬಿದರಿ ೨೦೦೦ನೆಯ ಇಸವಿಯಲ್ಲಿ ಐ.ಎ.ಎಸ್ ಪರೀಕ್ಷೆಯಲ್ಲಿ ಮೊದಲ ಸ್ಥಾನ ಪಡೆದು ಈಗ ಮಹಾರಾಷ್ಟ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಮಗ ವಿಜಯೇಂದ್ರ ಬಿದರಿ ೨೦೦೫ನೆಯ ಸಾಲಿನ ಐ.ಪಿ.ಎಸ್ ಅಧಿಕಾರಿಯಾಗಿದ್ದು ತಮಿಳುನಾಡಿನಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಬನ್ನಿ ಇದೇ ತಿಂಗಳ ೧೬ರಂದು ಕನ್ನಡ ಸಾಹಿತ್ಯ ಪರಿಷತ್ತಿನ ಶ್ರೀ ಕೃಷ್ಣರಾಜೇಂದ್ರ ಪರಿಷತ್ತಿನ ಮಂದಿರದಲ್ಲಿ '**ಕನ್ನಡದ ಧ್ರುವತಾರೆ**'ಯಾಗಿ ಬರಲಿರುವ ಶಂಕರ ಬಿದರಿಯವರ ಸಾಧನೆಯ ಹಾದಿಯನ್ನು ಅವರ ಮಾತಿನಲ್ಲಿಯೇ ಅರಿಯೋಣ.

Scanned with OKEN Scanner